# Gramothan India Foundation

## Eye Checkup Camp Inauguration @ Badiadka Gramothan Seva Centre



13-11-2016 ಉದಯವಾಣಿ

ಪ್ರಾದೇಶಿಕ ವಾರ್ತೆಗಳು

# ಬದಿಯಡ್ಕ ವಿದ್ಯಾಪೀಠದಲ್ಲಿ ನೇತ್ರ ತಪಾಸಣೆ ಶಿಬಿರ

ಚಿತ್ರ : ಅಶ್ವಿನಿ ಸ್ಟುಡಿಯೋ ಬದಿಯಡ್ಕ

ಪೆರಡಾಲ, ನ. 12: ಗ್ರಾಮೋತ್ಥಾನ ಸೇವಾ ಸಮಿತಿ ಬದಿಯಡ್ಕ ಹಾಗೂ ಶ್ರೀ ಭಾರತೀ ವಿದ್ಯಾಪೀಠದ ಸಂಯುಕ್ತ ಆಶ್ರಯದಲ್ಲಿ ಬದಿಯಡ್ಕ ಶ್ರೀ ಭಾರತೀ ವಿದ್ಯಾಪೀಠದಲ್ಲಿ ಮುಜುಂಗಾವು ಶ್ರೀ ಭಾರತೀ ನೇತ್ರ ಚಿಕಿತ್ಸಾಲಯದ ವತಿಯಿಂದ ಒಂದು ದಿನದ ನೇತ್ರ ತಪಾಸಣೆ ಶಿಬಿರ ಶನಿವಾರ ನಡೆಯಿತು.

ಗ್ರಾಮೋತ್ಥಾನ ಸೇವಾ ಸಮಿತಿ ಬದಿಯಡ್ಕದ ಅಧ್ಯಕ್ಷ ಜಯಪ್ರಕಾಶ ಪಜಿಲ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು.

ಪುತ್ತೂರು ಗೇರು ಸಂಶೋಧನಾ ಕೇಂದ್ರದ ರೀಸರ್ಚ್ ಅಸಿಸ್ಟೆಂಟ್ ಡಾ| ವಿಘ್ನೇಶ್ ದೀಪ ಬೆಳಗಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ನೇತ್ರ ತಜ್ಞ ಡಾ| ಕಾರ್ತಿಕ್, ಸಂಚಾಲಕ ಧನಂಜಯ ಮಧೂರು, ಮುಖ್ಯೋಪಾಧ್ಯಾಯ ಸತ್ಯನಾರಾಯಣ ಶರ್ಮ ಪಂಜಿತ್ತಡ್ಕ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

**300ಕ್ಕೂ ಅಧಿಕ ಮಂದಿಗೆ ಪ್ರಯೋಜನ**

ಈ ಸಂದರ್ಭದಲ್ಲಿ ಮಕ್ಕಳ ಭಾರ, ಎತ್ತರ ಹಾಗೂ ಇತರ ಪ್ರಾಥಮಿಕ ವಿವರಗಳನ್ನು ದಾಖಲಿಸಲಾಯಿತು. ಶಾಲಾ ಅಧ್ಯಾಪಕ ವೃಂದದವರ ಸಹಕಾರದೊಂದಿಗೆ 300ಕ್ಕೂ ಅಧಿಕ ವಿದ್ಯಾರ್ಥಿಗಳು ಹಾಗೂ ಪಾಲಕರು ಈ ಶಿಬಿರದ ಪ್ರಯೋಜನವನ್ನು ಪಡೆದುಕೊಂಡರು.